## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 797 (988) |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 14.03.2025 |
| ಉತ್ತರಿಸುವ ಸಚಿವರು | : | ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಯೋಜನಾ ಅನುದಾನವನ್ನು ವಿವಿಧ ಕಾರ್ಯಕ್ರಮಗಳಿಗೆ ಹೇಗೆ ನಿಗಧಿ ಪಡಿಸಲಾಗುತ್ತಿದೆ; ರಾಜ್ಯ ಆಯವ್ಯಯದಲ್ಲಿ ವಿವಿಧ ಕಾರ್ಯಕ್ರಮಗಳಿಗೆ ನೀಡಲ್ಪಡುವ ಅನುದಾನ ವಿವಿಧ ಜಿಲ್ಲೆಗಳೊಳಗೆ ಹೇಗೆ ಹಂಚಿಕೆಯಾಗುತ್ತಿದೆ; (ವಿವರ ನೀಡುವುದು)</td><td>ರಾಜ್ಯದಲ್ಲಿ ಯೋಜನಾ ಇಲಾಖೆಯ ಅಧೀನದಲ್ಲಿ ಬರುವ ವಿವಿಧ ಮಂಡಳಿ/ಪ್ರಾಧಿಕಾರಗಳಿಗೆ ಸಂಬಂಧಿಸಿದಂತೆ ಯೋಜನಾ ಅನುದಾನವನ್ನು ಆರ್ಥಿಕ ಇಲಾಖೆಯು ಆಯವ್ಯಯದ ಮೂಲಕ ಮಂಡಳಿ/ಪ್ರಾಧಿಕಾರಗಳಿಗೆ ನಿಗಧಿಪಡಿಸುತ್ತದೆ. ಸದರಿ ಅನುದಾನವನ್ನು ಮಂಡಳಿ/ಪ್ರಾಧಿಕಾರಗಳು ಸಾಮಾನ್ಯ ಸಭೆಯಲ್ಲಿ ನಿರ್ಣಯ ಕೈಗೊಂಡು ವಿವಿಧ ಕ್ಷೇತ್ರಗಳಿಗೆ ಸಮನಾಗಿ ಡಾ.ಡಿ.ಎಂ. ನಂಜುಂಡಪ್ಪ ವರದಿಯ ಸೂಚ್ಯಂಕದಂತೆ ಹಂಚಿಕೆ ಮಾಡಲಾಗುತ್ತದೆ. ಹೀಗೆ ಹಂಚಿಕೆಯಾಗುವ ಅನುದಾನವು ಸಂಬಂಧಪಟ್ಟ ಮಂಡಳಿ/ಪ್ರಾಧಿಕಾರಗಳ ಮೂಲಕ ಮಾನ್ಯ ಶಾಸಕರುಗಳು ಸೂಚಿಸುವ ಕಾಮಗಾರಿಗಳಿಗೆ ಜಿಲ್ಲೆ/ತಾಲ್ಲೂಕುಗಳಿಗೆ ನಿಗಧಿ ಪಡಿಸಲಾಗುತ್ತಿದೆ.</td></tr>
<tr><td>ಆ)</td><td>ರಾಜ್ಯದ ವಿವಿಧ ಅಭಿವೃದ್ಧಿ ಪ್ರಾಧಿಕಾರ/ಮಂಡಳಿಗಳಿಗೆ ವಾರ್ಷಿಕವಾಗಿ ನಿಗಧಿಪಡಿಸಿರುವ ಅನುದಾನ ಎಷ್ಟು; ಈಗಾಗಲೇ ನೀಡಲಾಗಿರುವ ಅನುದಾನ ಪೂರ್ಣ ಪ್ರಮಾಣದಲ್ಲಿ ಬಳಕೆಯಾಗಿದೆಯೇ; (ಮಂಡಳಿ/ಪ್ರಾಧಿಕಾರವಾರು ವಿವರ ನೀಡುವುದು)</td><td>ಯೋಜನಾ ಇಲಾಖೆಯ ಅಧೀನದಲ್ಲಿ ಬರುವ ವಿವಿಧ ಮಂಡಳಿ/ಪ್ರಾಧಿಕಾರಗಳಿಗೆ ಸಂಬಂಧಿಸಿದಂತೆ 2024-25ನೇ ಸಾಲಿನಲ್ಲಿ ಈ ಕೆಳಕಂಡಂತೆ ಅನುದಾನವನ್ನು ನಿಗದಿ ಪಡಿಸಲಾಗಿದೆ;<br>(ರೂ.ಕೋಟಿಗಳಲ್ಲಿ)
<table>
<tr><th>ಕ್ರ. ಸಂ</th><th>ಮಂಡಳಿ/ ಪ್ರಾಧಿಕಾರ</th><th>ಅನುದಾನ</th><th>ವೆಚ್ಚ * (ಫೆಬ್ರವರಿ -2025 ಅಂತ್ಯಕ್ಕೆ)</th></tr>
<tr><td>01</td><td>ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ</td><td>3000.00</td><td>2523.46</td></tr>
<tr><td>02</td><td>ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ</td><td>39.50</td><td>43.92</td></tr>
<tr><td>03</td><td>ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ</td><td>33.00</td><td>37.56</td></tr>
<tr><td>04</td><td>ಕರಾವಳಿ ಅಭಿವೃದ್ಧಿ ಪ್ರಾಧಿಕಾರ</td><td>10.50</td><td>6.00</td></tr>
<tr><td>05</td><td>ಕರ್ನಾಟಕ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ</td><td>600.00</td><td>359.49</td></tr>
</table>
* ಆರಂಭಿಕ ಶಿಲ್ಕು ಒಳಗೊಂಡಿರುತ್ತದೆ.</td></tr>
</table>

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ರಾಜ್ಯದಲ್ಲಿ 43 ಇಲಾಖೆಗಳಲ್ಲಿ 1802 ಕಾರ್ಯಕ್ರಮಗಳಿದ್ದು, ಅವುಗಳಿಗೆ ವಾರ್ಷಿಕವಾಗಿ ಬಿಡುಗಡೆಯಾಗುವ ಅನುದಾನ ಎಷ್ಟು; ಎಲ್ಲಾ ಕಾರ್ಯಕ್ರಮಗಳಿಗೂ ಅನುದಾನ ಬಿಡುಗಡೆಯಾಗುತ್ತಿದೆಯೇ; ಅನುದಾನ ಬಿಡುಗಡೆಯಾಗದ ಕಾರ್ಯಕ್ರಮಗಳನ್ನು ನಿಲ್ಲಿಸಲು ಅಥವಾ ಸಂಬಂಧಿತ ಇತರ ಕಾರ್ಯಕ್ರಮಗಳೊಳಗೆ ಒಟ್ಟುಗೂಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಯೋಜನಾ ಇಲಾಖೆಯ ಅಧೀನದಲ್ಲಿ ಬರುವ ಮಂಡಳಿ/ಪ್ರಾಧಿಕಾರಗಳಿಗೆ ನಿಗದಿತ ಅನುದಾನ ಬಿಡುಗಡೆಯಾಗುತ್ತಿರುವುದರಿಂದ ಯಾವುದೇ ಕಾರ್ಯಕ್ರಮಗಳನ್ನು ನಿಲ್ಲಿಸುವ ಅಥವಾ ಇತರೆ ಕಾರ್ಯಕ್ರಮಗಳೊಂದಿಗೆ ಒಟ್ಟುಗೂಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| ಈ) | ವಿವಿಧ ಇಲಾಖಾ ಅನುದಾನಗಳ ಮತ್ತು ಯೋಜನೆಗಳ ಅನುದಾನದ ಕ್ರಿಯಾ ಯೋಜನೆ ಮಾಡುವಾಗ ಶಾಸಕರ ಅಹವಾಲು ಬೇಡಿಕೆಗಳನ್ನು ಪರಿಗಣಿಸಲಾಗುತ್ತಿದೆಯೇ; ಈ ಕುರಿತು ಶಾಸಕರ ಪತ್ರಗಳಿಗೆ ಆಯಾಯ ಇಲಾಖೆಗಳು ಮತ್ತು ಸರ್ಕಾರ ಸ್ಪಂದಿಸಿದೆಯೇ; | ಯೋಜನಾ ಇಲಾಖೆಯ ಅಧೀನದಲ್ಲಿ ಬರುವ ಮಂಡಳಿ/ಪ್ರಾಧಿಕಾರಗಳಲ್ಲಿ ಮಾನ್ಯ ಶಾಸಕರುಗಳ ಶಿಫಾರಸ್ಸುಗಳಂತೆಯೇ ನಿಗದಿತ ಅನುದಾನಕ್ಕೆ ಕಾಮಗಾರಿಗಳ ಕ್ರಿಯಾ ಯೋಜನೆ ಪಡೆಯಲಾಗುತ್ತಿದೆ. ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ಜಿಲ್ಲಾಧಿಕಾರಿಗಳು/ಉಪ ವಿಭಾಗಾಧಿಕಾರಿಗಳು ಶಾಸಕರ ಪ್ರಸ್ತಾವನೆಯಂತೆಯೇ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ ಅನುಷ್ಠಾನಗೊಳಿಸಲಾಗುತ್ತಿದೆ. |
| ಉ) | ರಾಜ್ಯದ ವಿವಿಧ ಅಭಿವೃದ್ಧಿ ಪ್ರಾಧಿಕಾರ/ಮಂಡಳಿಗಳ ಮೂಲಕ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಗಳಿಗೆ ಪೂರ್ಣ ಪ್ರಮಾಣದಲ್ಲಿ ಅನುಮೋದನೆ ನೀಡಲಾಗಿದೆಯೇ; ಹಾಗೆಯೇ ಅಭಿವೃದ್ಧಿ ಪ್ರಾಧಿಕಾರ/ಮಂಡಳಿಗಳು ಸಲ್ಲಿಸಿದ ಬದಲಾವಣೆ ಪ್ರಸ್ತಾವನೆಗಳನ್ನು ಅನುಮೋದಿಸಲಾಗಿದೆಯೇ; ಈ ಕುರಿತಂತೆ ಹಿಂಬರಹ ನೀಡಲಾಗಿದೆಯೇ? | ಯೋಜನಾ ಇಲಾಖೆಯ ಅಧೀನದಲ್ಲಿ ಬರುವ ಮಂಡಳಿ/ಪ್ರಾಧಿಕಾರಗಳಲ್ಲಿ ನಿಗದಿತ ಅನುದಾನಕ್ಕೆ ಮಾನ್ಯ ಶಾಸಕರುಗಳು ನೀಡುವ ಪ್ರಸ್ತಾವನೆಗಳನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸಿ ಅನುಮೋದನೆ ನೀಡಲಾಗುತ್ತಿದೆ. ಅನಿವಾರ್ಯ ಸಂದರ್ಭಗಳಲ್ಲಿ ಅನುಮೋದಿತ ಕಾಮಗಾರಿಗಳನ್ನು ಬದಲಾವಣೆ ಮಾಡಲು ಸಲ್ಲಿಸುವ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗುತ್ತಿದೆ. |

**ಸಂಖ್ಯೆ: ಪಿಡಿಎಸ್/39/ಪಿಎಂಎಸ್/2025**

**(ಡಿ. ಸುಧಾಕರ್)**
**ಯೋಜನೆ, ಕಾರ್ಯಕ್ರಮ ಸಂಯೋಜನೆ**
**ಮತ್ತು ಸಾಂಖ್ಯಿಕ ಇಲಾಖಾ ಸಚಿವರು.**